ಜೀವಾತ್ಮಗಳ ಸಂಬಂಧದಂತೆ ಕೂಡಿಕೊಂಡಿವೆ.

ಇಲ್ಲಿ ಕವಿ 'ನೀರು ಮತ್ತು ಬೆಂಕಿ'ಗಳ ಗುಣವನ್ನು ಹೇಳುತ್ತಲೇ, ಅದನ್ನು ಸಾಮೂಹಿಕ ಹೊಣೆಗಾರಿಕೆಯನ್ನಾಗಿಸಲು ಯತ್ನಿಸುತ್ತಾರೆ. ಅರಬ್ ಬೀದಿಗಳಲ್ಲಿ ಒಂದು ಕೈಯಲ್ಲಿ ನೀರನ್ನು, ಮತ್ತೊಂದು ಕೈಯಲ್ಲಿ ಬೆಂಕಿಯನ್ನು ಹಿಡಿದು ರಾಬಿಯಾ ಅಲೆದಾಡಿದ್ದಳೆಂದು ಸೂಫಿತತ್ವ ಹೇಳುತ್ತದೆ. ಅಂದರೆ ನೀರು ಮತ್ತು ಬೆಂಕಿ ಅಥವಾ ಅದರದೇ ಇತರ ರೂಪಗಳು ನಮ್ಮ ಕವಿಗಳಿಗೆ ಮತ್ತೆಮತ್ತೆ ಕಾಡುತ್ತಿವೆ. ಅದರ ಮೂಲಕ ಜೀವಂತಿಕೆಯನ್ನು ನಾಶದ ಕ್ರಿಯೆಯನ್ನು ಒಟ್ಟಿಗೆ ಕರೆದೊಯ್ಯುವ ತತ್ವವನ್ನು ಕವಿಗಳು ಧರಿಸಿದ್ದಾರೆ. ಪ್ರಸ್ತುತ ಈ ಕವಿತೆಯಲ್ಲಿ ಅದೇ ರೂಪಗಳು ಇನ್ನಷ್ಟು ತೀಕ್ಷ್ಣವಾಗಿವೆ. ಈ ಕವಿತೆಯನ್ನು ಅಧ್ಯಾತ್ಮದ ನೆಲೆಗೆ ಅಂಟಿಸಿ ಸುಲಭವಾಗಿ ಕೈತೊಳೆದುಕೊಳ್ಳಬಹುದಿತ್ತು. ಆದರೆ, ಕವಿ ಆ ಎರಡು ರೂಪಾಂತರಗಳನ್ನೇ ಇಟ್ಟುಕೊಂಡು ದಮನಿತ ನೆಲೆಗೆ ಜೋಡಿಸುವುದು ಮತ್ತು ವಿಶಿಷ್ಟವಾದ ರೂಪಕವಾಗಿಸುವುದು ಹೊಸನೋಟ ಕ್ರಮ.

**ಹೊಳೆಯಾಗಿ ಹರಿಯುವ ಮಳೆ**
**ಕಡಲಾಗಿ ಉಕ್ಕುವ ಮಳೆ**
**ಹಸಿರು ನಾಲಗೆಯಾಗಿ ಬಿಸಿಲ ನೆಕ್ಕುವ ಮಳೆ**
**ನನ್ನೊಡಲ ಮೇಲೇಕೆ ಹನಿಯುತ್ತಿಲ್ಲ**

ಆರಂಭದ ಸಾಲು ಘನೀಕರಣಗೊಳ್ಳುವುದಕ್ಕಿಂತ ಮುಂಚಿನ ನೀರಿನ ಆರಂಭಿಕ ಮೂಲವನ್ನಿಟ್ಟು ಕೊಂಡು ಶುರುವಾಗುತ್ತದೆ. ಈ ಮಳೆ ಹೊಳೆಯಾಗಿ ಹರಿಯುತ್ತಿದೆ. ಮಳೆಗೆ ಚಲನೆಯ ಗುಣವಿದೆ. ಕಡಲಾಗಿ ಉಕ್ಕುವ ಮಳೆಗೆ ಸಮೃದ್ಧಿಯ ಗುಣವಿದೆ. ಎಲ್ಲ ಕಡೆಯೂ ಚೈತನ್ಯಲೋಕವನ್ನು ಕಟ್ಟುವ ಜೀವ ತುಂಬುವ ಗುಣವೂ ಇದೆ. ಅದಕ್ಕಾಗಿ ಮಳೆಯನ್ನು ಬಳಸಿಕೊಂಡು ಮಳೆ- ಹೊಳೆಯಾಗಿ, ಹರಿವ ನೀರು ಆಗಿ, ಸೇರಿಕೊಳ್ಳುವ ಕಡಲು ಆಗಿದೆ. ಮುಂದೆ ಹಸಿರು ನಾಲಗೆ ಆಗಿದೆ. ನೀರಿನ ಚಲನ ಗುಣದಿಂದ ಎಲ್ಲ ಕಡೆಗೂ ಚಾಚಿಕೊಳ್ಳುವ, ವಿಸ್ತರಿಸಿಕೊಳ್ಳುವ ಅದಷ್ಟೇ ಅಲ್ಲದೇ ಇನ್‌ಕ್ಲೂಸಿವ್ ಗುಣದರೂಪವಾಗಿ ಮಳೆಯಿದೆ. ನೀರಿದೆ. ಹಾಗಾಗಿ ಎಲ್ಲ ಕಡೆಗೂ ಆವರಿಸುತ್ತಿದೆ.

ಇದಷ್ಟೇ ಆಗಿದ್ದರೆ ಕವಿತೆಗೆ ರೊಮ್ಯಾಂಟಿಕ್ ಆದ ತತ್ವ



ಎನ್.ಕೆ. ಹನುಮಂತಯ್ಯ

ಬಂದು ಪ್ರಕೃತಿಯ ಅಧ್ಯಾತ್ಮವನ್ನು ಮಂಡಿಸಿ ಸುಮ್ಮನಾಗಿಬಿಡುತ್ತಿತ್ತು. ಆದರೆ, ಕವಿತೆಯ ಕೊನೆಯ ಸಾಲು ಮೇಲಿನ ಸಾಲುಗಳಿಗೆ ಪ್ರತಿಕ್ರಿಯೆಯಂತೆ ಅದರ ಜೊತೆ ಪ್ರತಿರೋಧದಂತೆ ಕಟ್ಟಿಕೊಂಡಿದೆ. ಕವಿಯ ಉದ್ದೇಶ ಮಳೆಯ, ನೀರಿನ ವ್ಯಾಪಾರವನ್ನು ಹೇಳುವುದಲ್ಲ ಅಥವಾ ಅದರೊಳಗೆ ಮುಳುಗಿ, ಲೋಕದ ಕಣ್ಣನ್ನು ಮುಚ್ಚಿಕೊಂಡು ತಾದ್ಯಾತ್ಮಗೊಳ್ಳುವುದು ಅಲ್ಲ. ಹಾಗಾದರೆ ಕವಿ ಏನನ್ನು ನಿರೀಕ್ಷಿಸುತ್ತಿದ್ದಾನೆ?

'ನನ್ನೊಡಲ ಮೇಲೇಕೆ ಹನಿಯುತ್ತಿಲ್ಲ' ಇದು ಕವಿ ಕೇಳುತ್ತಿರುವ ಪ್ರಶ್ನೆ. ಕವಿ ಇಲ್ಲಿಂದಲೇ ಒಂದು ದೊಡ್ಡ 'ಫ್ರಾಗ್ ಜಂಪ್'ನ್ನು ಮಾಡುತ್ತಿದ್ದಾನೆ; ಕಪ್ಪೆಯೊಂದು ತನ್ನ ಜಿಗಿತವನ್ನು ಮೊದಲ ಹೆಜ್ಜೆಗಿಂತ ಮತ್ತೂ ದೂರಕ್ಕೆ ಹಾರುವಂತೆ. ಇಲ್ಲಿ 'ನನ್ನ' ಎಂಬುದು ವೈಯಕ್ತಿಕ ನೆಲೆಯಾಗಿ ನಿಲ್ಲುವುದಿಲ್ಲವೇ? ಕವಿ ತನ್ನ ಖಾಸಗಿ ಸಂಕಟಗಳನ್ನಷ್ಟೇ ಕವಿತೆಯಾಗಿಸಿದ್ದಾನೆಯೇ? ಎಂಬಿಪ್ರಶ್ನೆಗಳು ಎದುರಾಗಬಹುದು. ಅದನ್ನೇ ಇಲ್ಲಿ ಫ್ರಾಗ್ ಜಂಪ್ ಎಂದದ್ದು. ಈ ಜಿಗಿತ ಕೇವಲ ಹಳೆಯದರಿಂದ ಪಾರಾಗುವುದಲ್ಲ. ತನಗೆ ಹೊಸದೆನಿಸಿದ ಸ್ಥಳವನ್ನು ಆಯ್ದುಕೊಳ್ಳುವುದು ಮತ್ತು ಅದರ ಮೂಲಕ ಮತ್ತೊಂದಕ್ಕೆ ಸಿದ್ಧತೆ ಮಾಡಿಕೊಳ್ಳುವುದು. ಹಾಗಾಗಿ ಕವಿ ತನ್ನ ಮುಂದಿನ ನಿಲುವು ಏನು ಎಂಬುದಕ್ಕೆ ಸಿದ್ಧತೆಯಂತೆ ಈ ಸಾಲಿದೆ. 'ನನ್ನೊಡಲು' ಪದ ಬಂದ ತಕ್ಷಣವೇ ಕವಿತೆ